ಎಂದುಕೊಂಡ ಹದಿನಾರರ ಹುಡುಗಿ ಆಶಾ ಪ್ರೇಮದಲ್ಲಿ ಬಿದ್ದದ್ದು ತನಗಿಂತ ಸುಮಾರು 20 ವರ್ಷ ಹಿರಿಯನಾದ ಗಣಪತ್‌ರಾವ್ ಭೋಸ್ಲೆಯೊಡನೆ. ಲತಾ ಅವರ ಸೆಕ್ರೆಟರಿ ಆಗಿದ್ದವರು. ಅದು ಕೇವಲ ಪ್ರೀತಿಯೋ ಅಥವಾ ವೃತ್ತಿ ಬದುಕಿಗೂ ನೆರವಾಗಬಹುದು ಎಂದೋ? ಗೊತ್ತಿಲ್ಲ. ಆ ಮದುವೆ ಲತಾರಿಂದ ಅವರನ್ನು ದೂರ ಮಾಡಿದ್ದಂತೂ ಹೌದು. ಆದರೆ ಆ ಮದುವೆ ಅವರ ಬದುಕಿನ ಒಂದು ಕಹಿಘಟ್ಟ ಎನ್ನುವುದೂ ಹೌದು. ಮನೆ ನಡೆಯಲೆಂದು ಹಗಲೂ ರಾತ್ರಿ ಮನೆಯಲ್ಲಿ ಮತ್ತು ಸ್ಟುಡಿಯೊದಲ್ಲಿ ದುಡಿಯಬೇಕಿತ್ತು. ಜೊತೆಗೆ ಗಂಡನ ಅನುಮಾನದ ಸ್ವಭಾವ, ಗಂಡ ಮತ್ತು ಆತನ ಮನೆಯವರಿಂದ ದೈಹಿಕ ಹಿಂಸೆ. ಇದರ ನಡುವೆ ಇಬ್ಬರು ಮಕ್ಕಳಾಗಿದ್ದವು. ಮೂರನೆಯ ಮಗು ಹೊಟ್ಟೆಯಲ್ಲಿದ್ದಾಗ ಬರಿಗೈಯಲ್ಲಿ ಆಕೆ ಮತ್ತು ಮಕ್ಕಳನ್ನು ಮನೆಯಿಂದ ಆಚೆಗಟ್ಟಲಾಗುತ್ತದೆ. ‘ಅದಕ್ಕಾಗಿ ನಾನು ಯಾರನ್ನೂ ದೂಷಿಸುವುದಿಲ್ಲ, ನನಗೆ ನನ್ನ ಮೂರು ಮಕ್ಕಳು ಸಿಕ್ಕಿದ್ದೂ ಸಹ ಆ ಮದುವೆಯಿಂದಲೇ...’ ಎನ್ನುತ್ತಾರೆ ಆಶಾ.



‘ಆರ್ಟ್ ಆಫ್ ಲೀವಿಂಗ್’ನ ರವಿಶಂಕರ್ ಗುರೂಜಿ ಜೊತೆಗೆ ಆಶಾ

ಅಷ್ಟರವರೆಗೂ ಆಕೆಗೆ ಸಿಗುತ್ತಿದ್ದ ಅವಕಾಶಗಳಾದರೂ ಎಂಥವು? ನಾಯಕಿಯ ಪಾತ್ರಕ್ಕೆಂದು ಲತಾ, ಗೀತಾ ದತ್ ಮತ್ತು ಶಂಶಾದ್ ಬೇಗಂ ಹಾಡುತ್ತಿದ್ದರು. ಎರಡನೆಯ ನಾಯಕಿ, ಪೋಷಕ ಪಾತ್ರ, ಕ್ಯಾಬರೇ ಹಾಡುಗಳು ಇವೇ ಆಶಾಗೆ ಸಿಗುತ್ತಿದ್ದದ್ದು. ಆದರೆ ಆಶಾ ಹಾಡುತ್ತಲೇ ಹೋದರು. ಮೊದಲ ಮದುವೆಯ ವಿಚ್ಛೇದನವೂ ಆಯಿತು. ಆಗ ಆಶಾ ಬದುಕಿಗೆ ಬಂದವರು ಓ.ಪಿ. ನಯ್ಯರ್. ಒಂದು ಸಲ ರೆಕಾರ್ಡಿಂಗ್‌ಗೆ ಬರುತ್ತೇನೆಂದು ಹೇಳಿದ ಲತಾ ಬರದೇ ಇದ್ದಿದ್ದರಿಂದ ಅಲ್ಲೇ ಅವರು ಪ್ರತಿಜ್ಞೆ ಮಾಡಿದ್ದರು, ‘ನನ್ನ ಸಂಗೀತ ನಿರ್ದೇಶನದಲ್ಲಿ ಲತಾಗೆ ಹಾಡಲು ಅವಕಾಶ ಇಲ್ಲ!’ ಅದೇನು ಕಾಕತಾಳೀಯವೋ ಏನೋ, ಅವರಷ್ಟೇ ಅಲ್ಲ, ಸಂಗೀತ ನಿರ್ದೇಶಕ ರಾಮಚಂದ್ರ, ಎಸ್.ಡಿ. ಬರ್ಮನ್ ಸಹ ಲತಾರೊಡನೆ ವೈಮನಸು ಬಂದಾಗ ಆರಿಸಿಕೊಂಡದ್ದು ಆಶಾರನ್ನು. ಹೇಗನ್ನಿಸಿರಬೇಕು ಆಶಾಗೆ?


ಓ.ಪಿ. ನಯ್ಯರ್


ಆರ್.ಡಿ. ಬರ್ಮನ್


ದಿಲ್ ತೊ ಪಾಗಲ್ ಹೈ ಚಿತ್ರದ ಲೇಗಯಿ ಲೇಗಯಿ ಹಾಡಿಗೆ ಹೆಜ್ಜೆ ಹಾಕಿದ ಕರಿಶ್ಮಾ ಕಪೂರ್

ಆಶಾ ದನಿಯ ಚಾಂಚಲ್ಯವನ್ನು ನೌಷಾದ್, ‘ಬಾಜಾರ್‌ಪನ್’ ಎಂದು ಟೀಕಿಸುತ್ತಿದ್ದರೆ ನಯ್ಯರ್ ಅದನ್ನು ಆಕೆಯ ತಾಕತ್ತು ಮಾಡಿದರು. ಅದುವರೆಗೂ ಹೆಣ್ಣೆಂದರೆ ಕೇವಲ ಪ್ರೇಮಿಸುವವಳು, ಕಾಯುವವಳು, ಗಂಡ ಕರೆದಾಗ ಓಗೊಡುವ ವಿಧೇಯಳು ಎನ್ನುವಂತಿದ್ದ ಹಾಡುಗಳಿಗೆ ಭಿನ್ನವಾಗಿ, ಹೆಣ್ಣಿನ, ಅದರಲ್ಲೂ ಆಶಾ ದನಿಗೆ ಪ್ರೀತಿ, ಪ್ರೇಮ, ಬಯಕೆ, ತುಂಟತನ, ಶೃಂಗಾರ ಎಲ್ಲವನ್ನೂ ಕೊಟ್ಟರು. ಇದು ನಿಜಕ್ಕೂ ಒಂದು ರೀತಿಯಲ್ಲಿ ‘ನಯಾದೌರ್’ ಆಗಿತ್ತು. ‘ಆಯಿಯೇ ಮೆಹರಬಾನ್’, ‘ಬಾಬೂಜಿ ಧೀರೆ ಚಲ್ನಾ..’ ‘ಉಡೆ ಜಬ್ ಜಬ್ ಜುಲ್ಫೆ ತೇರಿ..’ ‘ದೀವಾನ ಹುವಾ ಬಾದಲ್’ ‘ಇಶಾರೊ ಇಶಾರೋ ಮೆ’ ‘ಬಹುತ್ ಶುಕ್ರಿಯಾ ಬಡೀ ಮೆಹರ್ಬಾನಿ, ಮೇರೆ ಜಿಂದಗಿ ಮೇ ಹುಜೂರ್ ಆಪ್ ಆಯ’ ಹಾಡುಗಳು ಆಶಾರನ್ನು ನಾಯಕಿಯರ ದನಿಯಾಗಿಸಿದ್ದವು. ನಯ್ಯರ್ ಮತ್ತು ಆಶಾ ಹತ್ತಿರಾಗಿದ್ದರು. ಆ ಪ್ರೀತಿ ಸುಮಾರು 12 ವರ್ಷಗಳ ಕಾಲ ನಡೆಯಿತು. ಅವರಿಬ್ಬರ ಸಹಯೋಗದಲ್ಲಿ 300ಕ್ಕೂ ಹೆಚ್ಚು ಹಾಡುಗಳು ಬಂದವು. ಆದರೆ ನಯ್ಯರ್ ವಿವಾಹಿತರಾಗಿದ್ದರು ಮತ್ತು ಅವರ ಪತ್ನಿ ವಿಚ್ಛೇದನಕ್ಕೆ ಸಿದ್ಧರಿರಲಿಲ್ಲ. ‘ಓ ಹಸ್‌ಕೆ ಮಿಲೆ ಹಮ್‌ಸೆ, ಹಮ್ ಪ್ಯಾರ್ ಸಮಜ್ ಬೈಟೆ..’ ಇಬ್ಬರ ನಡುವೆ ಸಮಸ್ಯೆ, ಒತ್ತಡ ಶುರುವಾಯಿತು.

ಆಗ ಓಪಿ ನಯ್ಯರ್ ಅವರ ಸಂಗೀತ ನಿರ್ದೇಶನದಲ್ಲಿ ಆಶಾ ಹಾಡಿದ ಕಡೆಯ ಹಾಡು ಇದು:

ಚೈನ್ ಸೆ ಹಮ್‌ಕೋ ಕಭೀ, ಆಪನೇ ಜೀನೇ ನ ದಿಯಾ
ಜಹರ್ ಭೀ ಚಾಹಾ ಅಗರ್ ಪೀನಾ ತೋ ಪೀನೇ ನ ದಿಯಾ


ಪಿಟಿಐ ಚಿತ್ರ